

ರಾಜೀವ ನಾರಾಯಣ ನಾಯಕ

ಕಲೆ: ಎಚ್.ಎಸ್. ಮೋನಪ್ಪ



# ಓ ಕಾರವಾರವೇ! ಓ ದಣಿವರಿಯದ ಕಡಲೇ!

1

## ಬಯಲು ಸೀಮೆಯ ಹುಡುಗಿ

ಹುಡುಗಿ ಬಿಸಿಲನಾಡು ಕಲಬುರ್ಗಿಯಿಂದ ಕಡಲತೀರದ ಕಾರವಾರಕ್ಕೆ ಹೊರಟಿದ್ದಳು. ‘ನಮ್ಮ ಮಲ್ಲಿಗೆ ಮೊಗ್ಗಿನಂಥ ಹುಡುಗೀನ ಆ ಮೀನವಾಸನೆ ದೇಸಕ್ಕ ಯಾಕೋ ಕರೆದೊಯ್ತಿ?’ ಎಂದು ಸುಬ್ಬಜ್ಜಿ ಇಂದೂ ವಟಗುಟ್ಟಿದಳು. ವಿರುಪಾಕ್ಷಿ, ‘ಯೇ ಬಿಡ ಅಜ್ಜಿ, ನಿನ್ ಮಲ್ಲಿಗೆ ಮೊಗ್ಗು ಅಲ್ಲಿ ಮೀನ್ ತಲಿ ತಿಂದು ಶಾಣೆಯಾಗ್ತಾಳ ತಗೋ!’ ಎಂದಾಗ ಎಲ್ರೂ ಗೊಳ್ಳನೇ ನಕ್ಕರು. ‘ಥೂ ಖಬರಗೇಡಿ... ನನ್ ಮೊಮ್ಮಗಳು ಜಾಣ ಅದಾಳ, ನೀನ ದಡ್ಡ ಪರದೇಸಿ ಇದ್ದಿ. ಆಕಿಗೆ ಮೀನಾಗೀನಾ ಏನಾರ ತಿನ್ಸಿದಿ ಅಂದ್ರ ನಿನ್ನ ರುಂಡ ಚೆಂಡಾಡತೀನಿ, ನೋಡ್ ಮತ್ತ’ ಎಂದಳು ಸುಬ್ಬಜ್ಜಿ. ಅಜ್ಜಿ ರೇಗಿದಷ್ಟೂ ಅಲ್ಲಿ ನಗುವಿನ ಮೀಟರು ಜಾಸ್ತಿ ದೌಡಾಯಿಸುತ್ತಿತ್ತು. ಸುಮಿಯ ಅತ್ತೆ ಶೈಲು ಸುಮಿಯ ಕೋಮಲ ಬೆರಳಿಗೆ ಚಿನ್ನದುಂಗುರ ತೊಡಿಸಿದಳು. ಸುಮಿಯ ತಂದೆ ಲಿಂಗನಗೌಡ ಬಸವನಗೌಡ ಪಾಟೀಲ ಉರುಫ್ ಲಿಂಗಣ್ಣನವರು ‘ಜ್ವಾಪಾನವ್ವ, ನಿಮ್ಮತ್ತೆಗೆ ಹರೆಯದಲ್ಲಿ ಆ ದುಷ್ಯಂತ ಕೊಟ್ಟ ನೆನಪಿನ ಉಂಗುರ ಅದು’ ಎಂದು ವ್ಯಂಗ್ಯವಾಡಿದರು. ನೀಲವ್ವ ಗಂಡ ಲಿಂಗಣ್ಣನತ್ತ ಉರಿಗಣ್ಣು ಬಿಟ್ಟಾಗ ಅವರು ಗಪ್ ಆದರು. ಅವರಿಗೂ ಆ ಮಾತು ಬಾಯ್ತುಪ್ಪಿ ಬಂದಿತ್ತು. ಆ ಹೊತ್ತಲ್ಲಿ ಸಹೋದರಿಯ ಮನಸ್ಸಿಗೆ ನೋವು ಮಾಡುವ ದುರ್ಬುದ್ಧಿ ಇರಲಿಲ್ಲ.

ಸುಮಿ ಕಾರವಾರಕ್ಕೆ ಹೋಗೋ ವಿಷ್ಯ ತಿಳಿದು ಆಕಿ ಗೆಳತಿಯರೆಲ್ಲ ಬಂದ್ ಬಂದು ಹೋಗೋರು. ‘ಸನ್ಸೆಟ್ಟಲ್ಲಿ ಸೆಲ್ಫಿ ತೆಗ್ದು ವಾಟ್ಸಾಪ್ ಮಾಡು’ ಎಂದಳು ಒಬ್ಳು. ‘ಏ, ನಮ್ಮೂರಿಗೂ ಚೂರು ಸಮುದ್ರ ಕಳುಹಿಸಿಕೊಡೆ...’ ಎಂದಳು ಇನ್ನೊಬ್ಳು. ‘ಏಯ್! ಕಾರವಾರ ಸೀ ಶೋರಲ್ಲಿ ಹುಡುಗ್ರು

